ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **1246 /2023**

| | | | |
|---|---|---|---|
| ಸಾಕ್ಷಿಯ ಹೆಸರು | : ಕೃಷ್ಣನಾಯ್ಕ | | ಸಿ.ಡಬ್ಲ್ಯು 1 |
| ತಂದೆಯ ಹೆಸರು | : ಖಂಡ್ಯಾನಾಯಕ್ | | ಪಿ.ಡಬ್ಲ್ಯು 1 |
| ವಯಸ್ಸು | : 41 ವರ್ಷ | | |
| ಉದ್ಯೋಗ | : ಪಿ.ಎಸ್.ಐ ಅಜ್ಜಂಪುರ | | |
| ವಾಸ ಸ್ಥಳ | : ಅಜ್ಜಂಪುರ | | |

ದಿನಾಂಕಃ**12-08-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2021 ರಿಂದ ಜುಲೈ 2024 ರ ಮಧ್ಯೆದಲ್ಲಿ ತರೀಕೆರೆ ಠಾಣೆಯಲ್ಲಿ ಪಿ.ಎಸ್.ಐ ಎಂದು ಕೆಲಸ ಮಾಡಿದ್ದೇನೆ. ಈ ಪರಕರಣದಲ್ಲಿ ದಿಃ 20-09-2022 ರಂದು ಸಂಜೆ 5-30 ರ ಸಮಯದಲ್ಲಿ ನಾನು ಠಣೆಯಲ್ಲಿ ಇರುವಾಗ ಭಾತ್ಮೀದಾರರಿಂದ ನಮ್ಮ ಠಾಣಾ ವ್ಯಾಪ್ತಿಯ ಹಳಿಯೂರು ಗ್ರಾಮದಲ್ಲಿ ಅಕ್ರಮವಾಗಿ ಗಂಗಾಧರ ಎಂಬ ವ್ಯಕ್ತಿಯು ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿ ಬಂದ ಮೇರೆಗೆ ನಾನು ಚಾ.ಸಾ-4 ರಿಂದ 6 ಇವರನ್ನು ಕರೆದುಕೊಂಡು ಇಲಾಖಾ ವಾಹನದಲ್ಲಿ ಭಾತ್ಮಿ ಬಂದ ಸ್ಥಳದ ಕಡೆಗೆ ಹೊರೆಟನು. ರೈಲ್ವೇ ಗೇಟ್ ಹತ್ತಿರ ಚಾಸಾ-2 ಮತ್ತು 3 ಇವರನ್ನು ಬರಮಾಡಿಕೊಂಡಡು ಪಂಚರಾಗುವಂತೆಕ ತಿಳಿಸಿದೆನು. ಅವರು ಒಪ್ಪಿಕೊಂಡ ಕಾರಣ ಅವಇರನ್ನೂ ಕೂಡ ಮಾಹಿತಿ ಬಂದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ವಲ್ಪ ದೂರದಲ್ಲಿ ನಿಂತು ಕಾಯುತ್ತಿದ್ದಾಗ ಸಂಜೆ 6-00 ಗಂಟೆಯ ಹೊತ್ತಿಗೆ ಒಬ್ಬ ವ್ಯಕ್ತಿ ಒಂದು ಬಿಳಿ ಬಣ್ಣದ ಕೈಚೀವನ್ನು ಹಿಡಿದುಕೊಂಡು ಸಾವಜನಿಕರಿಗೆ ಮಾರಾಟ ಮಾಡುತ್ತಿರುವುದನ್ನು ಗಮನಿಸಿದೆವು. ಕೂಡಲೇ ಸಿಬ್ಬಂದಿಯೊಂದಿಗೆ ದಾಳಿ ಮಾಡಿದಾಗ ಸಾ-ರ್ವಜನಿಕರು ಓಡಿಹೋಗಿರುತ್ತಾರೆ. ಸಿಕ್ಕ ವ್ಯಕ್ತಿಯ ಹೆಸರು,ವಿಳಾಸ ಕೇಳಿದಾಗ ತನ್ನಹೆಸರನ್ನು ಗಂಗಾಧರತ ಂದೆ ಯಲ್ಲಪ್ಪ ಎಂದು ತಿಳಿಸಿದರು. ಆತನ ಬಳಿ ಇದ್ದ ಚೀಲದಲ್ಲಿ ಒಟ್ಟು 90 ಎಂ.ಎಲ್ ನ 23 ಓಸಿ ವಿಸ್ಕಿ ಪೌಚುಗಳು ಮುತ್ತು 90 ಎಂ.ಎಲ್ ನ 7 ಹೈವೆ ಡೀಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು ಇದ್ದವು. ಅದನ್ನು ಮಾರಾಟ ಮಾಡಲು ಆತನ ಬಳಿ ಯಾವುದೇ ಪರವಾನಗಿ ಇರಲಿಲ್ಲ. ಕಾರಣ ಚಾಸಾ-2 ಮತ್ತು ರ 3 ವರಸ ಮಕ್ಷಮ ಸಂಜೆ 6-10 ರಿಂದ 7-00 ಗಂಟೆಯ ಮದ್ಯದಲ್ಲಿ ಪಂಚನಾಮೆಯನ್ನು ಜರುಗಿಸಿ ಮದ್ಯವನ್ನು ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಂಡಿದ್ದೇನೆ. ನಂತರ ಆರೋಪಿ ಮತ್ತು ಮುದ್ದೆಮಾಲುನೊಂದಿಗೆ ಠಾಣೆಗೆ ಬಂದು ಸರ್ಕಾರದ ತರ್ಫೆ ವರದಿಯನ್ನು ಚಾ-ಸಾ9 ರವರಿಗೆ ಕೊಟ್ಟಿದ್ದೇನೆ.

ಅಮಾನತ್ತು ಪಂಚನಾಮೆಯನ್ನು ನಿ.ಪಿ-1, ವರದಿಯನ್ನು ನಿ.ಪಿ-2 ಎಂದು ಗುರುತಿಸಲಾಯಿತು. ಸಹಿಗಳನ್ನು ನಿ.ಪಿ-1(ಎ) ಮತ್ತು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಮುದ್ದೆಮಾಲನ್ನು ನೋಡಿ ಗುರುತಿಸುತ್ತೇನೆ ಅದನ್ನು ಎಂ.ಓ-ಎ 1 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ನಾನು ಮೇಲಿ ಹೇಳಿದಂತೆ ನನ್ನ ಸಿಬ್ಬಂದಿಯೊಂದಿಗೆ ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ಕೂಡ ನನ್ನ ಜೊತೆ ಯಾವುದೇ ದಾಳಿಗೆ ಬಂದಿಲ್ಲ ಮತ್ತು ಸ್ಥಳದಲ್ಲಿ ನಾವು ಯಾವುದೇ ಪಂಚನಾಮೆ ಬರೆದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಠಾಣೆಯಲ್ಲಿಯೇ ಕುಳಿತು ಬರೆಯಲಾಗಿದೆ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂದಇಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ಆತನ ವಿರುದ್ಧ ಸುಳ್ಳು ವರದಿಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಠಾಣೆಯ ಅಂಕಿ-ಸಂಖ್ಯೆ ಗೋಸ್ಕರ ಆರೋಪಿಯ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ

ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.